೫. **ತ್ಯಾಗಭಾವನೆಗೆ ಸಮದೃಷ್ಟಿಯೇ ಜೀವಾಳ :** ತ್ಯಾಗಜೀವನದಲ್ಲಿ ಸಮಬುದ್ಧಿ ಅವಶ್ಯಕ ಎಂದು ಶ್ರೀಕೃಷ್ಣ ಹೇಳಿರುವುದನ್ನು ಹಿಂದೆಯೇ ಗಮನಿಸಿದ್ದೇವೆ. ಅದಕ್ಕೆ ಪುಷ್ಟಿಕೊಡುವ ಕಥೆಯೊಂದನ್ನು ಶ್ರೀರಾಮಕೃಷ್ಣರು ಹೇಳುತ್ತಾರೆ: ಗಂಡಹೆಂಡತಿ ಸಂಸಾರ ತೊರೆದು ತೀರ್ಥಯಾತ್ರೆಗೆ ಹೋಗುತ್ತಾರೆ. ಗಂಡ ಹೆಂಡತಿಗಿಂತ ಮುಂದೆ ಹೋಗುತ್ತಿದ್ದ. ಅವನು ಒಂದು ವಜ್ರವನ್ನು ದಾರಿಯಲ್ಲಿ ನೋಡುತ್ತಾನೆ. ತಕ್ಷಣವೇ ಮಣ್ಣಿನಿಂದ ಅದನ್ನು ಮುಚ್ಚುತ್ತಾನೆ. ಹೆಂಡತಿ ನೋಡಿದರೆ, ಅವಳಿಗೆ ಆಸೆ ಉಂಟಾಗಬಹುದು ಎಂದು ಅವನ ಸಂದೇಹ; ಆಸೆ ಬಂದರೆ ತೀರ್ಥಯಾತ್ರೆಯ ಫಲ ಹೋಗಿಬಿಡುತ್ತದೆ ಎಂಬ ಸಂಶಯ. ಹೆಂಡತಿ ಅವನನ್ನು ಕಂಡು ಅದೇನೆಂದು ಕೇಳಿದಳು. ಗಂಡ, ಏನೋ ಉತ್ತರ ಕೊಟ್ಟನು. ಆದರೆ ಹೆಂಡತಿ ವಜ್ರವನ್ನು ನೋಡಿಬಿಟ್ಟಳು. ಗಂಡನ ಮನಸ್ಸಿನ ಆಲೋಚನೆಯನ್ನೂ ಗ್ರಹಿಸಿದಳು. ಅವನಿಗೆ ಹೀಗೆ ಹೇಳಿದಳು, "ವಜ್ರಕ್ಕೂ ಕಸಕ್ಕೂ ವ್ಯತ್ಯಾಸವನ್ನು ನೀವು ಕಾಣುತ್ತಿದ್ದೀರಿ. ಹೀಗಿರುವಾಗ ಸಂಸಾರವನ್ನು ಏಕೆ ತಾನೇ ತ್ಯಾಗ ಮಾಡಿದಿರಿ?"

### ಕೆಲವು ದೃಷ್ಟಾಂತಗಳು

ಮೇಲಿನ ಕಥೆಗಳಲ್ಲದೆ, ವೈರಾಗ್ಯ ಭಾವನೆಯನ್ನು ಸೂಚಿಸಲು ಹಲವಾರು ಸ್ವಾರಸ್ಯಕರ ದೃಷ್ಟಾಂತಗಳನ್ನು ಕೂಡ ಶ್ರೀರಾಮಕೃಷ್ಣರು ನೀಡುತ್ತಾರೆ. ಅವುಗಳಲ್ಲಿ ಕೆಲವು ಹೀಗಿವೆ : ೧. ಮುಳ್ಳುಪೊದೆಗಳಿರುವ ಕಾಡಿನಲ್ಲಿ ನಡೆಯಬೇಕಾದರೆ, ಚಪ್ಪಲಿ ಹಾಕಿಕೊಳ್ಳಬೇಕು. ಅದೇ ರೀತಿ ಪ್ರಪಂಚದಲ್ಲಿ ಮನುಷ್ಯನು ಅನೇಕ ಕಾಮನೆಗಳಿಗೆ ಬಲಿಯಾಗುತ್ತಾನೆ. ಆದ್ದರಿಂದ ಅವನು ತ್ಯಾಗವೈರಾಗ್ಯಗಳ ರಕ್ಷಣೆಯನ್ನು ಪಡೆದುಕೊಳ್ಳಬೇಕು. ೨. ಕಜ್ಜಿಯನ್ನು ಕೆರೆದುಕೊಳ್ಳುವುದು ಆನಂದದ ಅನುಭವವನ್ನು ನೀಡುತ್ತದೆ. ಆದರೆ ಆಮೇಲೆ ಅಸಾಧ್ಯ ವ್ಯಥೆಯಿಂದ ನರಳಬೇಕಾಗುತ್ತದೆ. ಹೀಗೆಯೇ ಪ್ರಪಂಚದ ಭೋಗಗಳು ಮೊದಮೊದಲಿಗೆ ಸಂತೋಷವನ್ನು ನೀಡುತ್ತವೆ. ಆದರೆ ಅವುಗಳ ಪರಿಣಾಮ ಭಯಂಕರವಾಗಿರುತ್ತದೆ. ೩. ಕುದುರೆಯ ಕಣ್ಣಿಗೆ ಎರಡೂ ಕಡೆಗಳಲ್ಲಿ ಪಟ್ಟಿ ಕಟ್ಟಿರುತ್ತಾರೆ. ಅದರಿಂದ ಅದು ಅತ್ತಿತ್ತ ನೋಡದೆ, ನೇರವಾಗಿ ಚಲಿಸುತ್ತದೆ. ಅದೇ ರೀತಿ, ವಿವೇಕ ವೈರಾಗ್ಯಗಳ ಪಟ್ಟಿಯನ್ನು ಮನಸ್ಸಿಗೆ ಕಟ್ಟಿಕೊಂಡರೆ, ಪ್ರಪಂಚದ ಭೋಗಗಳು ನಮಗೆ ಕಾಣಿಸುವುದಿಲ್ಲ. ೪. ಚಿಟ್ಟೆಯ ಹುಳು ಮೊದಲು ತನ್ನ ಗೂಡಿನಲ್ಲಿಯೇ ಬಂಧಿಯಾಗಿರುತ್ತದೆ. ತಾನು ಸುಂದರವಾದ ಚಿಟ್ಟೆಯಾದ ಮೇಲೆ ಗೂಡನ್ನು ಭೇದಿಸಿಕೊಂಡು, ಗಾಳಿ ಬೆಳಕನ್ನು ಅನುಭವಿಸಲು ಹಾರಿಹೋಗುತ್ತದೆ. ಇದೇ ರೀತಿ ಮಾಯೆಯ ಪಾಶದಲ್ಲಿ ಸಿಕ್ಕಿಬಿದ್ದಿರುವ ಜೀವಿಯು ಕೂಡ ವಿವೇಕವೈರಾಗ್ಯಗಳೆಂಬ ರೆಕ್ಕೆಗಳ ಮೂಲಕ ಮುಕ್ತಿಯನ್ನು ಪಡೆಯಬಹುದು. ೫. ದೇವರ ಕೋಣೆಯ ಬೀಗವನ್ನು ತೆರೆಯಬೇಕಾದರೆ, ಹಿಂದಿನಿಂದ ತಿರುಗಿಸಬೇಕು. ಹಾಗೆಯೇ ಭಗವಂತನನ್ನು ಪಡೆಯಬೇಕಾದರೆ, ಪ್ರಾಪಂಚಿಕ ಸಂಗತಿಗಳನ್ನು ತ್ಯಜಿಸಬೇಕು.

ಶ್ರೀರಾಮಕೃಷ್ಣರು ನಮಗೆ ನೀಡುವ ಕರೆ ಇದು : **"ಸಚ್ಚಿದಾನಂದವೆಂಬ ಕಡಲಿನ ಒಳಗೆ ಹೋಗು. ಲೋಭ ಮತ್ತು ಕ್ರೋಧಗಳೆಂಬ ಸಮುದ್ರದ ಮೊಸಳೆಗಳಿಗೆ ಅಂಜಬೇಡ. ವಿವೇಕ ಮತ್ತು ವೈರಾಗ್ಯಗಳೆಂಬ ಅರಿಶಿನವನ್ನು ದೇಹಕ್ಕೆ ಚೆನ್ನಾಗಿ ಲೇಪಿಸಿಕೋ. ಆಗ ಈ ಮೊಸಳೆಗಳು ನಿನ್ನ ಸಮೀಪಕ್ಕೆ ಬರುವುದಿಲ್ಲ."**

### ಗೃಹಸ್ಥರ ತ್ಯಾಗ

ಸಂಸಾರ ತಾಪತ್ರಯದಲ್ಲಿ ಬಿದ್ದು ನರಳುತ್ತಿರುವ ಗೃಹಸ್ಥರು ತ್ಯಾಗ ಮಾಡಲಾದೀತೆ? ಅಂಥವರು ಮಾನಸಿಕ ತ್ಯಾಗ ಮಾಡಬೇಕು ಎಂದು ಶ್ರೀರಾಮಕೃಷ್ಣರು ಬೋಧಿಸುತ್ತಾರೆ. ಅವರು ಗೃಹಸ್ಥರಿಗೆ ಸ್ಪಷ್ಟವಾಗಿ ಹೀಗೆ ಹೇಳುತ್ತಾರೆ : "ಕಠೋರ ನಿಯಮಗಳು ನಿಮ್ಮಂಥ ಗೃಹಸ್ಥರಿಗೆ ಅಲ್ಲ. ನಿಮ್ಮಂತವರು ಕುಟುಂಬದ ಮಧ್ಯದಲ್ಲಿ ಇದ್ದೂ ದೇವರ ಮೇಲೆ ಮನಸ್ಸಿಟ್ಟು ಅನಾಸಕ್ತರಾಗಿ ಇರಬಹುದು... ಪ್ರಪಂಚದಲ್ಲಿರಿ, ಆದರೆ ಪ್ರಾಪಂಚಿಕರಾಗಬೇಡಿ." ಗೃಹಕಾರ್ಯಗಳ ನಡುವೆಯೂ ಭಗವಂತನಲ್ಲಿ ಮನಸ್ಸನ್ನಿಡುವುದು ಸಾಧ್ಯವೇ? "ಸಾಧ್ಯ" ಎನ್ನುತ್ತಾರೆ ಶ್ರೀರಾಮಕೃಷ್ಣರು. ಈ ವಿಧಾನವನ್ನು ಸ್ವಾರಸ್ಯಕರವಾಗಿ ಹೀಗೆ ವಿವರಿಸುತ್ತಾರೆ: "ನೀವು ಗೃಹಸ್ಥರಾದರೆ ಬಾಧಕವಿಲ್ಲ. ನಿಮ್ಮ ಮನಸ್ಸನ್ನು ದೇವರ ಮೇಲಿಡಬೇಕು. ಒಂದು ಕೈಯಿಂದ ನಿಮ್ಮ ಕೆಲಸವನ್ನು ಮಾಡಿ, ಮತ್ತೊಂದು ಕೈಯಿಂದ ದೇವರ ಪಾದಗಳನ್ನು ಹಿಡಿಯಿರಿ. ಪ್ರಪಂಚದಲ್ಲಿ ನೀವು ಮಾಡಬೇಕಾದ ಕೆಲಸವಿಲ್ಲದೆ ಇರುವಾಗ, ಎರಡೂ ಕೈಗಳಿಂದ ಅವನ ಪಾದಗಳನ್ನು ನಿಮ್ಮ ಹೃದಯಕ್ಕೆ ಅಪ್ಪಿಕೊಳ್ಳಿ."

ಈ ಬಗೆಯ ಮಾನಸಿಕ ಪರಿಪಕ್ವತೆ ಬರಬೇಕಾದರೆ, ಆಗಾಗ್ಗೆ ನಿರ್ಜನಸ್ಥಾನಕ್ಕೆ ಹೋಗಿ ಏಕಾಂತದಲ್ಲಿ ಸಾಧನೆ ಮಾಡಬೇಕೆಂದು ಶ್ರೀರಾಮಕೃಷ್ಣರು ಸಲಹೆ ನೀಡುತ್ತಾರೆ : "ನೀವು ಪ್ರಪಂಚದಲ್ಲಿ ನಿಸ್ಸಂಗವಾಗಿ ಇರಬೇಕೆಂದು ಇಚ್ಛಿಸಿದರೆ ಮೊದಲು ಏಕಾಂತಸ್ಥಳದಲ್ಲಿ ಕೆಲವು ಕಾಲ, ಅಂದರೆ ಒಂದು ವರ್ಷವೋ, ಆರು ತಿಂಗಳೋ, ಒಂದು ತಿಂಗಳೋ, ಹನ್ನೆರಡು ದಿನಗಳೋ ಸಾಧನೆ ಮಾಡಿರಬೇಕು. ಹೀಗೆ ಏಕಾಂತದಲ್ಲಿರುವಾಗ ಯಾವಾಗಲೂ ದೇವರನ್ನು ಧ್ಯಾನಿಸಬೇಕು ಮತ್ತು ಭಕ್ತಿಯನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಬೇಕು... ದೇವರೊಬ್ಬನೇ ನಿಮ್ಮವನು. ಅವನೇ ನಿಮ್ಮ ಸರ್ವಸ್ವ. ಅವನನ್ನು ಹೊಂದುವುದು ಹೇಗೆ ಎಂಬುದೇ ನಿಮ್ಮ ಮುಖ್ಯ ಗುರಿಯಾಗಬೇಕು." ❐



# ನವಯುಗದ ನೂತನ ಮಾನವ : ಶ್ರೀರಾಮಕೃಷ್ಣ

ಸ್ವಾಮಿ ಭಜನಾನಂದ

**ಶ್ರೀರಾಮಕೃಷ್ಣರು ಭಾರತದ ಪ್ರಾಚೀನ ಸನಾತನ ಧಾರ್ಮಿಕ ಭಾವನೆಯ ನವನೂತನ ಅಭಿವ್ಯಕ್ತಿಯಾಗಿದ್ದಾರೆ. ಅಷ್ಟು ಮಾತ್ರವಲ್ಲ, ಇಡೀ ವಿಶ್ವದ ಆಧ್ಯಾತ್ಮಿಕ ಪ್ರಜ್ಞೆಯ ಹೊಚ್ಚಹೊಸ ಸ್ವರೂಪಪ್ರಾಯರೂ ಆಗಿದ್ದಾರೆ. ಈ ಮಹಾಮಹಿಮರದು ನಿತ್ಯನೂತನ ವ್ಯಕ್ತಿತ್ವ; ನವನವೀನ ಭಾವನಾಸಂಪನ್ನತೆ. ಈ ಅಂಶವನ್ನು ಐತಿಹಾಸಿಕ, ತಾತ್ತ್ವಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಕೋನಗಳಿಂದ ವಿದ್ವತ್ಪೂರ್ಣವಾಗಿ ವಿಶ್ಲೇಷಿಸಿ, ಸರಳವಾಗಿ ವಿವರಿಸಿರುವ ಅಪೂರ್ವ ಲೇಖನಮಾಲೆಯೊಂದನ್ನು ಈ ತಿಂಗಳಿನ ಸಂಚಿಕೆಯಿಂದ ಆರಂಭಿಸುತ್ತಿದ್ದೇವೆ. ರಾಮಕೃಷ್ಣ ಮಹಾಸಂಘದ ಆಂಗ್ಲ ಪತ್ರಿಕೆ 'ಪ್ರಬುದ್ಧಭಾರತ'ದಲ್ಲಿ ಹೊರಬರುತ್ತಿರುವ ಈ ಲೇಖನಸರಣಿಯನ್ನು ಕನ್ನಡದ ಓದುಗರಿಗೆ ಪ್ರಸ್ತುತಪಡಿಸುತ್ತಿರುವುದು ತುಂಬ ಹೆಮ್ಮೆಯ ಹಾಗೂ ಸಂತೋಷದ ವಿಷಯ. ಇದರ ಲೇಖಕರಾದ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಕಾರ್ಯದರ್ಶಿಗಳಲ್ಲಿ ಒಬ್ಬರು. ಇವರು ಅನುಭಾವ ಸಾಹಿತ್ಯದಲ್ಲಿ ಪರಿಣತರು ಮತ್ತು ಶಾಸ್ತ್ರೀಯ ವಿಷಯಗಳಲ್ಲಿ ನುರಿತವರು. ತಮ್ಮ ಈ ಬರಹವನ್ನು 'ವಿವೇಕಪ್ರಭ' ಪತ್ರಿಕೆಯಲ್ಲಿ ಪ್ರಕಟಪಡಿಸಲು ಅನುಮತಿ ಕೊಟ್ಟಿರುವ ಪೂಜ್ಯರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತಿದ್ದೇವೆ.** (**ಅನುವಾದ** : ಸಂ.)

**ನೋಡಿರಣ್ಣ, ನೀವೆಲ್ಲ ಬಂದು ಈ ನೂತನ ಮಾನುಷನ**
**ತ್ಯಾಗವಿವೇಕದ ಚೀಲಗಳೆರಡನು ಹೆಗಲಲಿ ಹೊತ್ತಿಹನ**

ಬಂಗಾಳಿ ಭಾಷೆಯಲ್ಲಿ ಶ್ರೀರಾಮಕೃಷ್ಣರನ್ನು ಕುರಿತಾದ ಒಂದು ಸುಂದರವಾದ ಹಾಡಿದೆ; ಅದರ ಆರಂಭದ ಸಾಲುಗಳು ಇವು. ಇದನ್ನು ರಾಮಕೃಷ್ಣ ಆಶ್ರಮಗಳಲ್ಲಿ ಇಂಪಾದ ದನಿಯಲ್ಲಿ ಹಾಡುತ್ತಾರೆ. ಅದರಲ್ಲೂ ಶ್ರೀರಾಮಕೃಷ್ಣರ ಜನ್ಮದಿನದಂದು ಇದನ್ನು ವಿಶೇಷವಾಗಿ ಹಾಡಲಾಗುತ್ತದೆ. ಈ ಹಾಡನ್ನು ರಚಿಸಿದ್ದು ಸುಮಾರು ನೂರು ವರ್ಷಗಳ ಹಿಂದೆ. ಈ ಹಾಡನ್ನು ಹಾಡುತ್ತಿದ್ದ ಹಾಗೂ ಇದರ ತಾಳಬದ್ಧ ಲಯಕ್ಕೆ ನರ್ತಿಸುತ್ತಿದ್ದ ನವಯುವಕರು ಇಂದು ವೃದ್ಧರಾಗಿ ಮರಣವನ್ನಪ್ಪಿದ್ದಾರೆ. ವರ್ಷಗಳು ಉರುಳಿದ ಹಾಗೆಲ್ಲಾ, ಪೀಳಿಗೆ ಪೀಳಿಗೆಗಳು ಸರಿದಹಾಗೆಲ್ಲ, ಸಾವಿರಾರು ಜನರು ಈ ಹಾಡನ್ನು ಹಾಡುತ್ತಿದ್ದಾರೆ. ಅವರೆಲ್ಲರೂ ಮುದುಕರಾಗುತ್ತಿದ್ದಾರೆ, ಮೃತ್ಯುವಶರಾಗುತ್ತಿದ್ದಾರೆ. ಆದರೆ ಅವರೆಲ್ಲರಿಗೂ ಶ್ರೀರಾಮಕೃಷ್ಣರು ನಿತ್ಯ ನೂತನಮಾನವರಾಗಿಯೇ ಉಳಿದಿದ್ದಾರೆ. ಹಾಗೆಯೇ ಇನ್ನೂ ಕೆಲವು ಶತಮಾನಗಳು ಕಳೆದರೂ ಅವರು ನೂತನಮಾನವರಾಗಿಯೇ ಉಳಿದುಬಿಡುತ್ತಾರೆ ಅನ್ನಿಸುತ್ತದೆ. ಶ್ರೀರಾಮಕೃಷ್ಣರು ಯಾವಾಗಲೂ ವರ್ತಮಾನಕಾಲದ ಮೂಲಾದರ್ಶವನ್ನು ಪ್ರತಿನಿಧಿಸುತ್ತಾರೆ. ಇದೇ ಅವರ ಕಾಲಾತೀತ ನವೀನತೆಗೆ ಕಾರಣ.

## ಯುಗಾಂತರಗಳು

ಮಾನವ ಸಂಸ್ಕೃತಿಯು ಹಲವಾರು ಹಂತಗಳಲ್ಲಿ ಅಭಿವೃದ್ಧಿಯನ್ನು ಹೊಂದಿದೆ. ಇತಿಹಾಸವನ್ನು ಅಧ್ಯಯನಮಾಡಿದವರೆಲ್ಲರೂ ಇದನ್ನು ಗಮನಿಸಬಹುದು. ಈ ಹಂತಗಳನ್ನು ಯುಗಾಂತರಗಳು, ಕಾಲಮಾನಗಳು ಅಥವಾ ಜೀವಮಾನಗಳು ಎಂದು ಕರೆಯುತ್ತಾರೆ. ಯಾವುದೋ ಒಂದು ನಿರ್ದಿಷ್ಟ 'ಯುಗಧರ್ಮ'ವು (Zeitgeist) ಮಾನವ ಇತಿಹಾಸದ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಪ್ರಚಲಿತವಾಗಿರುತ್ತದೆ. ಅಂತಹ ಕಾಲಘಟ್ಟವನ್ನೇ ಯುಗಾಂತರವೆಂದು (epoch) ಕರೆಯುವುದು. ಯುಗಧರ್ಮದ ಪರಿಕಲ್ಪನೆಯನ್ನು ೧೯ನೇ ಶತಮಾನದ ಜರ್ಮನ್ ತತ್ತ್ವಶಾಸ್ತ್ರಜ್ಞನಾದ ಹೆಗೆಲ್ ಎಂಬುವವನು ಪ್ರಸಿದ್ಧಿಗೊಳಿಸಿದನು. ಅವನ ಪ್ರಕಾರ, ಯುಗಧರ್ಮವೆಂದರೆ ಸಾಮಾನ್ಯವಾಗಿ ಒಂದು ನಿರ್ದಿಷ್ಟ ಕಾಲಮಾನದಲ್ಲಿ ಕಂಡುಬರುವ ಬೌದ್ಧಿಕ, ನೈತಿಕ ಮತ್ತು ಸಾಂಸ್ಕೃತಿಕ ವಾತಾವರಣ ಎಂದು ಅರ್ಥ. ಅದಲ್ಲದೆ, ಒಂದು ಗೊತ್ತುಪಡಿಸಿದ ಕಾಲಾವಧಿಯಲ್ಲಿ ಬದುಕಿಬಾಳಿದ ಜನರ ಸಮಷ್ಟಿ ಮಾನಸವನ್ನು ಆವರಿಸಿಕೊಂಡಿದ್ದ ಆಲೋಚನೆಗಳು, ನಂಬಿಕೆಗಳು, ಮೌಲ್ಯಗಳು ಕೂಡ ಇದರ ಅರ್ಥವ್ಯಾಪ್ತಿಯಲ್ಲಿ ಬರುತ್ತವೆ.

ಯುಗಾಂತರಗಳ ಸರಣಿಯ ಸ್ವರೂಪದ ಬಗ್ಗೆ ಎರಡು ಮುಖ್ಯವಾದ ಅಭಿಪ್ರಾಯಗಳಿವೆ. ಒಂದು ದೃಷ್ಟಿಯ ಪ್ರಕಾರ, ಐತಿಹಾಸಿಕ ಬೆಳವಣಿಗೆಯು ಏಕಪರಿಣಾತ್ಮಕ ಅಥವಾ ರೇಖಾತ್ಮಕ (linear). ಇದರ ಪ್ರಕಾರ, ಮಾನವ ಸಂಸ್ಕೃತಿಯು ಅನಾಗರಿಕ ನೆಲೆಯಿಂದ, ಅಷ್ಟೊಂದು ಅಭಿವೃದ್ಧಿ ಹೊಂದದ ನೆಲೆಗಳಿಗೆ ಬೆಳವಣಿಗೆ ಹೊಂದುತ್ತದೆ. ಅನಂತರ ಹೆಚ್ಚು ಹೆಚ್ಚು ಅಭಿವೃದ್ಧಿ ಹೊಂದಿರುವ ಹಂತಗಳಿಗೆ ವಿಕಾಸಹೊಂದುತ್ತದೆ. ಹೆಗೆಲ್, ಕಾರ್ಲ್ ಮಾರ್ಕ್ಸ್ ಮತ್ತಿತರರು ಈ ಅಭಿಪ್ರಾಯದ ಪ್ರತಿಪಾದಕರಾಗಿದ್ದಾರೆ.

ಇದಕ್ಕಿಂತ ಭಿನ್ನವಾದ ಇನ್ನೊಂದು ಅಭಿಪ್ರಾಯದ ಪ್ರಕಾರ, ಯುಗಾಂತರಗಳ ಸರಣಿಯು ವರ್ತುಲದ ರೀತಿಯಲ್ಲಿದೆ. ವಿವಿಧ ಯುಗಗಳ ಸರಣಿಯು ವರ್ತುಲದಂತೆ ಸುತ್ತುತ್ತಿರುತ್ತದೆ ಎಂಬ ಸಿದ್ಧಾಂತವನ್ನು ಭಾರತ, ಗ್ರೀಸ್ ಮತ್ತು ಚೀನಾದೇಶವೂ ಸೇರಿದಂತೆ ಜಗತ್ತಿನ ಹಲವು ಪ್ರಾಚೀನ ಸಂಸ್ಕೃತಿಗಳಲ್ಲಿ ನಾವು ಕಾಣಬಹುದು. ಭಾರತೀಯ ಸಂಸ್ಕೃತಿಯಲ್ಲಿ ಈ ಕಾಲಮಾನಗಳನ್ನು 'ಯುಗ' ಎಂದು ಕರೆಯಲಾಗುತ್ತದೆ. ಸತ್ಯ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಾಗಿ ಅವುಗಳನ್ನು ಪಟ್ಟಿಮಾಡಲಾಗಿದೆ. ಈ ಯುಗಗಳು ಇದೇ ಕ್ರಮದಲ್ಲಿ ದೀರ್ಘ ವರ್ತುಲದಲ್ಲಿ ಮತ್ತೆ ಮತ್ತೆ ಸಂಭವಿಸುತ್ತವೆ ಎಂದು ನಂಬಲಾಗಿದೆ. ಮಾನವನ ಇತಿಹಾಸವು ಮತ್ತೆ ಮತ್ತೆ ಸರ್ವದಾ ಮರುಕಳಿಸುತ್ತಿರುವ ನಾಲ್ಕು ಯುಗಗಳ ವರ್ತುಲಗಳನ್ನು ಒಳಗೊಂಡಿದೆ ಎಂದು ಪ್ರಾಚೀನ ಗ್ರೀಕರು ಮತ್ತು ರೋಮನ್ನರು ಕೂಡ ಕಲ್ಪಿಸಿಕೊಂಡಿದ್ದರು. ಆ ಯುಗಗಳೆಂದರೆ, ಸ್ವರ್ಣಯುಗ, ರಜತಯುಗ, ತಾಮ್ರ ಯುಗ ಮತ್ತು ಕಬ್ಬಿಣದ ಯುಗ. ಮಾರ್ಕಸ್ ಅರೇಲಿಯಸ್ ಮತ್ತು ಸೆನೆಕಾ ಅವರ ಬರಹಗಳಲ್ಲಿ, ಇತಿಹಾಸವು ಮುಗ್ಧತೆಯ ಅಥವಾ ಸರಳತೆಯ ಯುಗದಿಂದ ಹೇಗೆ ಆರಂಭಗೊಳ್ಳುವುದು ಎನ್ನುವುದನ್ನು ವಿವರಿಸಲಾಗಿದೆ. ಹಾಗೆಯೇ ಭೌತಿಕ ಸಂಪತ್ತು ಮತ್ತು ವೈಭೋಗಗಳ ಹೆಚ್ಚಳವು ಹೇಗೆ ಪಾಪಪ್ರವೃತ್ತಿ ಮತ್ತು ಅಧಃಪತನಗಳಿಗೆ ಕಾರಣವಾಗುತ್ತದೆ ಎನ್ನುವುದನ್ನೂ ಬಣ್ಣಿಸಲಾಗಿದೆ.

ಕಾಲಚಕ್ರ ಅಥವಾ ಕಾಲವರ್ತುಲಗಳ ಸಿದ್ಧಾಂತವನ್ನು ೧೯ನೆಯ ಶತಮಾನದಲ್ಲಿ ಪುನರುಜ್ಜೀವನಗೊಳಿಸಿದವರೆಂದರೆ ಪ್ರಸಿದ್ಧ ತತ್ತ್ವಶಾಸ್ತ್ರಜ್ಞರಾದ ನೀಷೆ ಮತ್ತು ತದನಂತರ ಬಂದ ಆಸ್ವಾಲ್ಡ್ ಸ್ಪೆನ್‌ಗ್ಲರ್ ಮತ್ತಿತರರು. ಸ್ಪೆನ್‌ಗ್ಲರ್ ಪ್ರಕಾರ 'ಸಂಸ್ಕೃತಿ' ಎನ್ನುವುದು ಒಂದು ಜೀವಂತ ಜೀವಿಯಿದ್ದಂತೆ. ಹೇಗೆ ಮಾನವ ಜೀವನದಲ್ಲಿ ಬಾಲ್ಯ, ಯೌವನ, ವೃದ್ಧಾಪ್ಯ ಮತ್ತು ಮರಣಗಳೆಂಬ ನಾಲ್ಕು ಹಂತಗಳಿವೆಯೋ ಹಾಗೆಯೇ ಸಂಸ್ಕೃತಿಯಲ್ಲಿ ಕೂಡ ನಾಲ್ಕು ಹಂತಗಳಿವೆ. ಇದಲ್ಲದೆ, ಪಾಶ್ಚಾತ್ಯ ಸಂಸ್ಕೃತಿಯು ಸರಿಪಡಿಸಲಾಗದ ಅವನತಿಯ ಸ್ಥಿತಿಯಲ್ಲಿದೆ ಎಂದು ಕೂಡ ಸ್ಪೆನ್‌ಗ್ಲರ್ ನಂಬಿದ್ದನು. ಆರ್ನಾಲ್ಡ್ ಟಾಯನ್‌ಬಿ, ಪಿಟ್ರಿಮ್ ಸೊರೊಕಿನ್, ಕ್ಯಾರಲ್ ಕ್ವಿಗ್‌ಲಿ ಮುಂತಾದ ಹಲವು ಚಿಂತಕರು ಕೂಡ, ಮಾನವ ಇತಿಹಾಸವು ಬೆಳವಣಿಗೆಯ ಸ್ಥಿತಿ, ಸಂಪದ್ಭರಿತ ಸ್ಥಿತಿ ಮತ್ತು ಅವನತಿಯ ಸ್ಥಿತಿಗಳ ಕಾಲಾವಧಿಗಳನ್ನು ಸಾಗಿಹೋಗಬೇಕಾಗುವುದು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿಯು ಈಗ ಅವನತಿಯ ಸ್ಥಿತಿಯಲ್ಲಿದೆ; ಆದರೆ ಅವನತಿಯ ನಂತರ ಆ ಸಂಸ್ಕೃತಿಯ ಪುನುರುಜ್ಜೀವನ ಜರುಗಲೂಬಹುದು ಎಂದೂ ಅವರು ಹೇಳುತ್ತಾರೆ.

### ಆದರ್ಶದ ಸ್ಥಿತ್ಯಂತರ (Paradigm Shift)

ಮೇಲಿನ ಸಿದ್ಧಾಂತಗಳಾವುದನ್ನೂ ಒಪ್ಪದೆಯೂ, ಮಾನವ ಇತಿಹಾಸವನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿದಾಗ, ಅದರಲ್ಲಿ ಯುಗಾಂತರಗಳ ಸರಣಿ ಇರುವುದನ್ನು ನಾವು ಕಂಡುಕೊಳ್ಳಬಹುದು. ಪ್ರತಿಯೊಂದು ಯುಗವೂ ಪ್ರಭಾವಶಾಲಿಯಾದ ಕೆಲವು ಚಿಂತನೆಗಳಿಂದ, ಒಂದು ನಿರ್ದಿಷ್ಟ ಸ್ವರೂಪದ ನಂಬಿಕೆಗಳಿಂದ ಹಾಗೂ ಮೌಲ್ಯಗಳು ಮತ್ತು ಜೀವನ ದೃಷ್ಟಿಗಳಿಂದ ವಿಶಿಷ್ಟವಾಗಿ ಕಂಡುಬರುವುದನ್ನು ನಾವು ಗುರುತಿಸಬಹುದು. ಈ ಮೇಲಿನ ಸಾಂಸ್ಕೃತಿಕ ಅಂಶಗಳಲ್ಲಿನ ಆದರ್ಶದ ಸ್ಥಿತ್ಯಂತರವು ಒಂದು ಯುಗವು ಕಳೆದು ಮತ್ತೊಂದು ಯುಗವು ಆರಂಭಗೊಂಡಾಗ ಜರುಗುತ್ತದೆ. ಈ ಬಗೆಯ ಸ್ಥಿತ್ಯಂತರವು ಆ ಯುಗಕ್ಕೆ ಸಂಬಂಧಿಸಿದ ಒಂದು ಮೂಲಭೂತ ಪ್ರಶ್ನೆ ಅಥವಾ ಹಲವು ಪ್ರಶ್ನೆಗಳ ಸರಣಿಯಿಂದ ಆರಂಭಗೊಳ್ಳುತ್ತದೆ.

ಪಾಶ್ಚಾತ್ಯ ಸಂಸ್ಕೃತಿಯ ಗಾಢವಾದ ಮೂಲವಿರುವುದು ಗ್ರೀಕ್ ಸಂಸ್ಕೃತಿಯಲ್ಲಿ. ಸುಮಾರು ಕ್ರಿಸ್ತಪೂರ್ವ ೬ನೆಯ ಶತಮಾನದಲ್ಲಿ ಗ್ರೀಕ್ ಸಂಸ್ಕೃತಿಯ ಒಂದು ನೂತನ ಯುಗವು ಆರಂಭಗೊಂಡಿತು. ಆ ಸಮಯದಲ್ಲಿ ಥೇಲ್ಸ್, ಅನಾಕ್ಸಿಮ್ಯಾಂಡರ್, ಎಂಪೆಡೋಕ್ಲೆಸ್ ಮತ್ತಿತರ ಚಿಂತಕರು ಒಂದು ಪ್ರಶ್ನೆಯನ್ನು ಮುಂದಕ್ಕಿಟ್ಟರು. "ಇಡೀ ವಿಶ್ವ ರಚನೆಗೊಂಡಿರುವ ಆತ್ಯಂತಿಕ ವಸ್ತು ಅದಾವುದು?" ಎನ್ನುವುದೇ ಆ ಪ್ರಶ್ನೆ. ಇದಾಗಿ ಮುನ್ನೂರು ವರ್ಷಗಳ ನಂತರ ಸಾಕ್ರಟೀಸ್ ಹುಟ್ಟಿದನು. " 'ಸದ್ಗುಣ' ವೆಂದರೆ ಏನು?" ಎನ್ನುವ ಇನ್ನೊಂದು ಮೂಲಭೂತ ಪ್ರಶ್ನೆಯೊಂದಿಗೆ ಅವನು ನೂತನ ಯುಗವೊಂದನ್ನು ಆರಂಭಿಸಿದನು. ಇದಕ್ಕೆ ಅವನು ಕೊಟ್ಟ ಉತ್ತರ "ಸದ್ಗುಣವೆಂದರೆ ಜ್ಞಾನ" ಎಂಬುದಾಗಿತ್ತು. ಇನ್ನೂ ಮುನ್ನೂರು ವರ್ಷಗಳ ನಂತರ ಪ್ಯಾಲಸ್ಟೈನ್ ಪ್ರದೇಶದಲ್ಲಿ ಯುವ ಬಡಗಿಯೊಬ್ಬನಿಗೆ ಒಬ್ಬ ಮಗನು ಹುಟ್ಟಿದನು. ಅವನ ಹೆಸರು ಯೇಸುಕ್ರಿಸ್ತ ಎಂದು. ಅವನು ಮೇಲಿನ ಪ್ರಶ್ನೆಗೆ ಬೇರೆಯ ಉತ್ತರವನ್ನೇ ನೀಡಿದನು. "ಸದ್ಗುಣವೆಂದರೆ ಪ್ರೀತಿಸುವುದು – ಭಗವಂತನನ್ನು ಪ್ರೀತಿಸುವುದು, ಮಾನವರನ್ನು ಪ್ರೀತಿಸುವುದು" ಎಂಬುದೇ ಆತನ ಉತ್ತರವಾಗಿತ್ತು. ಈ ಉತ್ತರದಿಂದ ಯೂರೋಪಿನಲ್ಲಿ ಒಂದು ನೂತನ ಸಹಸ್ರಮಾನದ ಅನಾವರಣವಾಯಿತು. ಹಾಗೆಯೇ ಪ್ರಾಚೀನ ಗ್ರೀಕ್ ತತ್ತ್ವಶಾಸ್ತ್ರಜ್ಞರು ಮುಂದಿಟ್ಟಿದ್ದ ಈ ಬಗೆಯ ಹಲವಾರು ಪ್ರಶ್ನೆಗಳನ್ನು ೧೬ನೆಯ ಶತಮಾನದಲ್ಲಿ ಮತ್ತೊಮ್ಮೆ ಎತ್ತಿಕೊಳ್ಳಲಾಯಿತು.

ಭಾರತೀಯ ಸಂಸ್ಕೃತಿಯ ಉದಯೋನ್ಮುಖ ಕಾಲದಲ್ಲಿ ವೈದಿಕ ಋಷಿಗಳು ಕೆಲವು ಮೂಲಭೂತ ಪ್ರಶ್ನೆಗಳನ್ನು